**ಕರ್ನಾಟಕ ಸರ್ಕಾರ**
**ಶಾಲಾ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ**
**ಕೇಂದ್ರೀಕೃತ ದಾಖಲಾತಿ ಘಟಕ**
**ಕೆಂಪೇಗೌಡ ರಸ್ತೆ, ಕಾವೇರಿ ಭವನದ ಎದುರು, ಬೆಂಗಳೂರು -09**

ಸಂ. 1990185: DPI-CPI0CAC(OTH)/9/2025-CAC ದಿನಾಂಕ: 19/05/2026

**ಜ್ಞಾಪನಾ**

ಸರ್ಕಾರಿ ಪ್ರೌಢಶಾಲಾ ಸಹಶಿಕ್ಷಕ ವೃಂದದಿಂದ ಸರ್ಕಾರಿ ಪದವಿ-ಪೂರ್ವ ಕಾಲೇಜುಗಳ ಉಪನ್ಯಾಸಕರ ವೃಂದದ ಹುದ್ದೆಗೆ ಬಡ್ತಿ ನೀಡಲು ನಿಗದಿಪಡಿಸಿದ ಅರ್ಹತಾ ಪರೀಕ್ಷೆಯನ್ನು ದಿನಾಂಕ: 26/05/2026 ರಿಂದ 30/05/2026ರ ವರೆಗೆ ರಾಜ್ಯದ ಶೈಕ್ಷಣಿಕ ವಿಭಾಗೀಯ ಕೇಂದ್ರಗಳಲ್ಲಿ ನಡೆಸಲು ಪರಿಷ್ಕೃತ ವೇಳಾಪಟ್ಟಿಯನ್ನು ಬಿಡುಗಡೆಗೊಳಿಸಿದ್ದು, ಈ ಪರೀಕ್ಷೆಗೆ 8070 ಮಂದಿ ನೋಂದಾಯಿಸಿಕೊಂಡಿರುತ್ತಾರೆ.

ಈ ಪರೀಕ್ಷೆಗೆ ಹಾಜರಾಗುವ ಶಿಕ್ಷಕರಿಗೆ 'ಅನ್ಯ ಕಾರ್ಯ ನಿಮಿತ್ತ ವಿನಾಯಿತಿ' (OOD) ಸೌಲಭ್ಯವನ್ನು ನೀಡಲಾಗಿದೆ. ಇವರು ಪರೀಕ್ಷೆಯ ವೇಳಾಪಟ್ಟಿಯ ಪ್ರಕಾರ ಇವರಿಗೆ ಅನ್ವಯಿಸುವ ವಿಷಯದ ಪರೀಕ್ಷೆ ನಡೆಯುವ ದಿನಗಳಂದು ಪರೀಕ್ಷೆಗೆ ಹಾಜರಾಗಲು ಅನುಮತಿಸಲಾಗಿದೆ. ಪರೀಕ್ಷೆಗೆ ಹಾಜರಾದ ಬಗ್ಗೆ ಪರೀಕ್ಷಾ ಕೊಠಡಿ ಮೇಲ್ವಿಚಾರಕರು ಸಹಿ ಮಾಡಿದ ಪರೀಕ್ಷಾ ಪ್ರವೇಶ ಪತ್ರದ ಪ್ರತಿಯನ್ನು ಶಾಲಾ ಮುಖ್ಯೋಪಾಧ್ಯಾಯರಿಗೆ ಸಲ್ಲಿಸುವುದು. ಯಾವುದೇ ಪ್ರಯಾಣ ಭತ್ಯೆ ಮತ್ತು ದಿನಭತ್ಯೆಗಳಿಗೆ ಅವಕಾಶ ಇರುವುದಿಲ್ಲ.

Digitally signed by
VIKAS KISHOR SURALKAR
Date: 20-05-2026
16:33:45
ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು

ಇವರಿಗೆ: ಸೂಕ್ತ ಕ್ರಮಕ್ಕಾಗಿ-

1. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ), ಶಾಲಾ ಶಿಕ್ಷಣ ಇಲಾಖೆ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಾಲಾ ಶಿಕ್ಷಣ ಇಲಾಖೆ
3. ರಾಜ್ಯದ ಎಲ್ಲಾ ಸಂಬಂಧಿತ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರು
4. ಈ ಪರೀಕ್ಷೆಗೆ ಹಾಜರಾಗುವ ಸಂಬಂಧಿತ ಶಿಕ್ಷಕರು

ಪ್ರತಿ: ಸಹನಿರ್ದೇಶಕರು, ಕೇಂದ್ರೀಕೃತ ದಾಖಲಾತಿ ಘಟಕ, ಆಯುಕ್ತರ ಕಛೇರಿ, ಬೆಂಗಳೂರು -9